# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 6768 /2024

**ಚಾಸಾ ಃ- 05 / ಪ್ರಾಸಾ ಃ- 01**

| | |
|---|---|
| ಹೆಸರು | ನಾರಾಯಣ ಎಂ |
| ತಂದೆ ಹೆಸರು | ಮರಿಯಪ್ಪ |
| ವಯಸ್ಸು | 50 |
| ಉದ್ಯೋಗ | ಅಬಕಾರಿ ಇನ್ಸ್ ಪೆಕ್ಟರ್ , ಮೂಡಿಗೆರೆ ವಲಯ , ಚಿಕ್ಕಮಂಗಳೂರು |
| ವಿಳಾಸ | ಬೆಂಗಳೂರು |

**ದಿನಾಂಕಃ 13.03.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಫೆಬ್ರವರಿ 2022 ರಿಂದ ಸೆಪ್ಟೆಂಬರ್ 2026ರವರೆಗೆ ಮಾಗಡಿ ಅಬಕಾರಿ ವಲಯದಲ್ಲಿ ಅಬಕಾರಿ ನಿರೀಕ್ಷಕರೆಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 23.03.2024 ರಂದು ಲೋಕಸಭಾ ಚುನಾವಣೆ ನೀತಿಸಂಹಿತೆ ಹಿನ್ನೆಲೆಯಲ್ಲಿ ನಾನು ಮತ್ತು ನನ್ನ ಸಿಬ್ಬಂದಿಗಳಾದ ಚಾಸಾ3 ರವರಾದ ಚೇತನ್ ಹಾಗೂ ಚಾಸಾ 4 ರವರಾದ ಮೋಹನ್ ಕುಮಾರ್ ರವರ ಜೊತೆ ಗಸ್ತು ಮಾಡುತ್ತಿರುವಾಗ ಮರೂರು ಹ್ಯಾಂಡ್ ಪೋಸ್ಟ್ ಬಳಿ ಇದ್ದಾಗ ಬಾತ್ಮಿದಾರರಿಂದ ನನಗೆ ಮಾಹಿತಿ ಬಂದಿದ್ದೇನೆಂದರೆ ಮರೂರು ಹ್ಯಾಂಡ್ ಪೋಸ್ಟ್ ನಿಂದ ಕುಣಿಗಲ್ ಕಡೆ ಹೋಗುವ ರಸ್ತೆಯಲ್ಲಿ ತಿಗಳರಪಾಳ್ಯ ದಲ್ಲಿ ರಂಗಸ್ವಾಮಿ ಎಂಬುವವನು ತನ್ನ ಮನೆಯಲ್ಲಿ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದ್ದು ಆಗ ನಾನು ಮತ್ತು ಚಾಸಾ 3 ಹಾಗೂ 4 ರವರು ಸದರಿ ಗ್ರಾಮಕ್ಕೆ ಹೋಗಿ ರಸ್ತೆಯಲ್ಲಿ ಇದ್ದಂತಹ ಇಬ್ಬರು ವ್ಯಕ್ತಿ ಗಳಾದ ಮುತ್ತುರಾಯಪ್ಪ ಮತ್ತು ಸಿದ್ದರಾಜುರವರಿಗೆ

ನಾವು ಬಂದಂತಹ ಮಾಹಿತಿಯನ್ನು ಹೇಳಿ ಸದರಿ ಕಾರ್ಯಾಚಾರಣೆಗೆ ನಮಗೆ ಸಹಕರಿಸಬೇಕು ಎಂದು ಕೇಳಿಕೊಂಡು ಆಗ ಸದರಿ ಚಾಾ 1 ಮತ್ತು 2 ರವರು ಒಪ್ಪಿಕೊಂಡಿದ್ದು ಅವರಿಗೆ ನೋಟೀಸನ್ನು ಜಾರಿ ಮಾಡಿರುತ್ತೇವೆ. ನಂತತರ ಚಾಸಾ1 ಮತ್ತು 2 ರವರ ಜೊತೆ ಆರೋಪಿ ರಂಗಸ್ವಾಮಿರವರ ಮನೆಯ ಹತ್ತಿರ ಹೋಗಿ ನೋಡಲಾಗಿ ಒಬ್ಬ ವ್ಯಕ್ತಿಯು ಮನೆಯ ಮುಂದುಗಡೆ ಕೂತಿದ್ದರು. ಆತನನ್ನು ಕೇಳಲಾಗಿ ಆತನು ನಾನೇ ರಂಗಸ್ವಾಮಿ ಎಂದು ಹೇಳಿದನು. ನಂತರ ನಾವು ಬಂದ ವಿಷಯವನ್ನು ಆತನಿಗೆ ಹೇಳಿದಾಗ ಆತನು ಗಾಭರಿಗೊಂಡಿರುತ್ತಾನೆ. ನಂತರ ನಾವು ಆತನಿಗೆ ಮನೆಯನ್ನು ಶೋಧನೆ ಮಾಡಬೇಕು ನಿಮ್ಮ ಅಭ್ಯಂತರ ಇದೆಯೆ ಎಂದು ಕೇಳಲಾಗಿ ಅತನು ಇಲ್ಲ ಎಂದು ತಿಳಿಸಿರುತ್ತಾನೆ. ನ್ಯಾಯಾಲಯದಿಂದ ಶೋದನಾ ವರೆಂಟನ್ನು ಪಡೆಯಲು ಕಾಲಾವಕಾಶ ಇರದ ಕಾರಣ ಸ್ಥಳದಲ್ಲೆ ಶೋಧನಾ ಸಮುಚಿತ ವಾರೆಂಟನ್ನು ತಯಾರಿಸಿ ಆರೋಪಿ ಹಾಗೂ ಚಾಸಾ 1 ಮತ್ತು 2 ರವರ ಸಹಿಯನ್ನು ಪಡೆದುಕೊಂಡಿರುತೇವೆ ಮತ್ತು ನಾವು ಸಹಿ ಮಾಡಿರುತ್ತೇವೆ. ನಂತರ ಮನೆಯನ್ನು ಪರಿಶೀಲಿಸುವ ಮೊದಲು ನಮ್ಮ ಅಂಗಶೋಧನೆಯನ್ನು ಮಾಡಿಕೊಂಡಿರುತ್ತೇವೆ. ನಂತರ ಮನೆಯನ್ನು ಪ್ರವೇಶಿಸಲಾಗಿ ಬಲಭಾಗದಲ್ಲಿ ರೇಷ್ಮೆ ಹುಳು ಸಾಕಾಣಿಕೆ ಮಾಡುವ ಕೋಣೆ ಇದ್ದು ಹಾಗೂ ಸದರಿ ಕೋಣೆಯಲ್ಲಿ ರೇಷ್ಮೆ ಹುಳುಗಳನ್ನು ಸಾಕುವ ದಡೆಗಳು ಇದ್ದವು. ಅದರ ಕೆಳಗಡೆ ನಮಗೆ 2 ರಟ್ಟಿನ ಪೆಟ್ಟಿಗೆಗಳು ಕಂಡು ಬಂದಿದ್ದು ಅವುಗಳನ್ನು ತೆಗೆದು ನೋಡಲಾಗಿ ಅವುಗಳಲ್ಲಿ ಮದ್ಯದ ಟೆಟ್ರಾ ಪ್ಯಾಕುಗಳು ಕಂಡು ಬಂದಿರುತ್ತವೆ. ನಂತರ ಮತ್ತೊಂದು ಕೋಣೆಯನ್ನು ಪರಿಶೀಲಿಸಲಾಗಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಮದ್ಯದ ಟೆಟ್ರಾ ಪ್ಯಾಕುಗಳು ಹಾಗೂ ಮತ್ತೊಂದು ಬಿಳಿ ಬಣ್ಣದ ಚೀಲದಲ್ಲಿ ಬಿಯರ್ ಬಾಟೆಲಿಗಳು ಕಂಡುಬಂದಿರುತ್ತವೆ. ಎಲ್ಲವನ್ನೂ ಪರಿಶೀಲಿಸಿ ನೋಡಲಾಗಿ 90 ಎಂ ಎಲ್ ನ 192 ಓಸಿ ವಿಸ್ಕಿಯ ಟೆಟ್ರಾ ಪ್ಯಾಕುಗಳು ಕಂಡು ಬಂದಿರುತ್ತದೆ, 180 ಎಂ ಎಲ್ ನ 25 ಓಟಿ ವಿಸ್ಕಿಯ ಟೆಟ್ರಾ ಪ್ಯಾಕುಗಳು ಕಂಡು ಬಂದಿರುತ್ತವೆ ಹಾಗೂ 650 ಎಂಎಲ್ ನ ಬುಲೆಟ್ ಎಂಬ ಹೆಸರಿನ 12 ಬಿಯರ್ ಬಾಟೆಲುಗಳು ಕಂಡುಬಂದಿರುತ್ತವೆ.

ಒಟ್ಟಾಗಿ 21.780 ಲೀ. ಮದ್ಯ ಹಾಗೂ 7.8 ಲೀ. ಬಿಯರ್ ದಾಸ್ತಾನು ಕಂಡುಬಂದಿರುತ್ತದೆ. ಸದರಿ ಮದ್ಯ ಹಾಗೂ ಬಿಯರ್ ಅನ್ನು ಇಟ್ಟುಕೊಳ್ಳಲು ನಿಮಗೆ ಏನಾದರೂ ಪರವಾನಗಿ ಇದೆಯೆ ಎಂದು ಆರೋಪಿಗೆ ಕೇಳಲಾಗಿ ಆರೋಪಿಯು ಯಾವುದೇ ಪರವಾಗಿ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ಈ ಮಟ್ಟದಲ್ಲಿ ಮದ್ಯ ಮತ್ತು ಬಿಯರ್ ಅನ್ನು ಹೊಂದುವುದು ಅಬಕಾರಿ ಕಾಯ್ದೆ ಪ್ರಕಾರ ಶಿಕ್ಷಾರ್ಹ ಅಪರಾಧ ಎಂದು ತಿಳಿಸಿ ಸದರಿ ಮದ್ಯ ಮತ್ತು ಬಿಯರ್ ಅನ್ನು ಸ್ಥಳದಲ್ಲಿಯೇ ಜಪ್ತಿ ಪಡಿಸಿ ಕೊಂಡಿರುತ್ತೇವೆ. ದೊರೆತ ಮದ್ಯ ಹಾಗೂ ಬಿಯರ್ ನಲ್ಲಿ 20 ಓಸಿ ವಿಸ್ಕಿಯ ಟೆಟ್ರಾ ಪ್ಯಾಕು, ಓಟಿ ವಿಸ್ಕಿಯಲ್ಲಿ 5 ಟೆಟ್ರಾ ಪ್ಯಾಕು ಹಾಗೂ ಬಿಯರಿನಲ್ಲಿ 1 ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕ ಮಾಡಿರುತ್ತೇವೆ. ಮಾದರಿ ಮೊಹರಿನ ನಕಲನ್ನು ಸ್ಥಳದಲ್ಲೆ ತಯಾರಿಸಿ ಪಂಚರ ಸಹಿಯನ್ನು ಪಡೆಯಲಾಯಿತು. ನಂತರ ಮಹಜರ್ ಕ್ರಮವನ್ನು ರಾತ್ರಿ 8.30 ರಿಂದ 9.30 ರವರೆಗೆ ಜರುಗಿಸಲಾಗಿರುತ್ತದೆ. ಆರೋಪಿಗೆ ಕಲಂ 41 ಸಿ ಆರ್ ಪಿಸಿ ಅಡಿಯಲ್ಲಿ ನೋಟೀಸನ್ನು ಜಾರಿ ಮಾಡಿ ತನಿಖೆಗೆ ಹಾಜರಾಗುವಂತೆ ತಿಳಿಸಿರುತ್ತದೆ. ನಂತರ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳಗೊಂದಿಗೆ ಠಾಣೆಗೆ ಹಾಜರಾಗಿ ಸ್ವದೂರನ್ನು ದಾಖಲಿಸಿಕೊಂಡಿರುತ್ತೇವೆ. ಸದರಿ ರಾಸಾಯನಿಕ ಪರೀಕ್ಷೆಗಾಗಿ ಮುದ್ದೆಮಾಲುಗಳನ್ನು ಚಾಸ 3 ರವರೊಂದಿಗೆ ದಿನಾಂಕ 29.04.2024 ರಂದು ಕಳುಹಿಸಿಕೊಟ್ಟಿರುತ್ತೇನೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಆರೋಪಿ ಪರ ವಕೀಲರಿಂದ ಆರೋಪಿಯ ಗುರುತಿಸುವಿಕೆಗೆಗಾಗಿ ಯಾವುದೇ ತಕರಾರು ಇರುವುದಿಲ್ಲ.

ಈಗ ಸಾಕ್ಷಿಗೆ ಪಂಚರುಗಳಿಗೆ ನೀಡಿದ ನೋಟೀಸನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನೋಟೀಸನ್ನು ನಿಪಿ-1 ಮತ್ತು ನಿಪಿ-02 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಮತುತ ನಿಪಿ-02(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಶೋಧನಾ ವಾರೆಂಟ್ ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ವಾರೆಂಟನ್ನು ನಿಪಿ-3 ಎಂದು

ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಲಿಸ್ಟ್ ಆಫ್ ಆರ್ಟಿಕಲ್ಸ್ ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಲಿಸ್ಟ್ ಆಫ್ ಆರ್ಟಿಕಲ್ಸ್ ಅನ್ನು ನಿಪಿ-4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ)ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮಾದರಿ ಮೊಹರಿನ ನಕಲನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಾದರಿ ಮೊಹರಿನ ನಕಲನ್ನು ನಿಪಿ-5 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರನ್ನು ನಿಪಿ-6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪ್ರಥಮ ವರ್ತಮಾನ ವರಧಿಯನ್ನು ನಿಪಿ-7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿವೇದನೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿವೇದನೆಯನ್ನು ನಿಪಿ-8 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ದಿನಾಂಕ 29.04.2024 ರಂದು ರಾಸಾಯನಿಕ ತಜ್ಞರು ರಾಸಾಯನಿಕ ಪ್ರಯೋಗಾಲಯ ಬೆಂಗಳೂರು ಇವರಿಗೆ ನೀಡಿದ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಪತ್ರವನುನ ನಿಪಿ-9 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಸದರಿ ರಾಸಾಯನಿಕ ಪರೀಕ್ಷೆಗೆ ಜಪ್ತಿ ಪಡಿಸಿಕೊಂಡ 20 ಓಸಿ ವಿಸ್ಕಿಯ ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 1 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಓಟಿ ವಿಸ್ಕಿಯ 5 ಟೆಟ್ರಾ ಪ್ಯಾಕುಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆಮಾಲು 2 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 1 ಬಿಯರ್ ಬಾಟಲಿಯನ್ನು ತೋರಿಸಲಾಗಿ

ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು 3 ಎಂದು ಗುರುತಿಸಲಾಯಿತು.

ದಿನಾಂಕ 15.07.2024 ರಂದು ಪ್ರಕರಣದ ಕಡತವನ್ನು ಚಾಸಾ 7 ರವರಾದ ರಾಜಪ್ಪ ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲು** ಃ ಪಾಟೀಸವಾಲಿಗೆ ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 6768 /2024**

**ಚಾಸಾ ಃ- 05 / ಪ್ರಾಸಾ ಃ- 01**

**ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಸಿಡಿಪಿ ವಕೀಲರಿಂದಃ**

ನಿಮಗೆ ಮಾಹಿತಿ ಬಂದಾಗ ಎಷ್ಟು ಗಂಟೆ ಆಗಿತ್ತು ಎಂದರೆ ಸಾಕ್ಷಿಯು ರಾತ್ರಿ 8.00 ಗಂಟೆ ಎಂದು ನುಡಿಯುತ್ತಾರೆ.ಮರೂರ ಹ್ಯಾಂಡ್ ಪೋಸ್ಟ್ ನಿಂದ ತಿಗಳರ ಪಾಳ್ಯಕ್ಕೆ ಎಷ್ಟು ಕಿ.ಮೀ. ಆಗುತ್ತದೆ ಎಂದರೆ ಸಾಕ್ಷಿ 6-7 ಕಿ.ಮೀ. ಎಂದು ನುಡಿಯುತ್ತಾರೆ. ಮರೂರು ಹ್ಯಾಂಡ್ ಪೋಸ್ಟ್ ನಲ್ಲಿ ಸಾರ್ವಜನಿಕರನ್ನು ಪಂಚರನಾನಗಿ ಬರಲು ಕೇಳಲು ನಿಮಗೆ ಏನು ತೊಂದರೆ ಇದ್ದಿರಲಿಲ್ಲ ಎಂದರೆ ಸಾಕ್ಷಿ ನಾವು ಅಲ್ಲಿ ಯಾರನ್ನೂ ಕೇಳಲಿಲ್ಲವೆಂದು ನುಡಿಯುತ್ತಾರೆ. ಆರೋಪಿ ರಂಗಸ್ವಾಮಿರವರ ಮನೆಯ location ಅನ್ನು ನಿಮಗೆ ತಿಳಿಸಿದವರು ಯಾರು ಎಂದರೆ ಸಾಕ್ಷಿ ಬಾತ್ಮಿದಾರರು ಎಂದು ನುಡಿಯುತ್ತಾರೆ. ಸದರಿ ಆರೋಪಿಯ ಮನೆಯ location ಅನ್ನು ಬಾತ್ಮಿದಾರರು ತಿಳಿಸಿರುತ್ತಾರೆ ಎಂದು ನಿವೇದನೆಯಲ್ಲಿ ಮತ್ತು ಮಹಜರ್ ನಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಆರೋಪಿಯ ಮನೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ 8.10 ಕ್ಕೆ ಎಂದು ನುಡಿಯುತ್ತಾರೆ. ಪಂಚರು ಎಲ್ಲಿದ್ದರು ಹಾಗೂ ಅವರನ್ನು ಎಷ್ಟು ಗಂಟೆಗೆ ಕೇಳಿರುತ್ತೀರಿ ಎಂದರೆ ಸಾಕ್ಷಿಯು ನಾವು ಯಾವ ಸ್ಥಳಕ್ಕೆ ಹೋಗಬೇಕಿತ್ತೊ ಆ ಸ್ಥಳದ 20- 25 ಮೀಟರ್ ದೂರದಲ್ಲಿ ಇದ್ದರು ಹಾಗೂ 8.10 ರಲ್ಲೆ ಅವರನ್ನು ಬೇಟಿಯಾಗಿರುತ್ತೇವೆ ಎಂದು ನುಡಿಯುತ್ತಾರೆ. ಪಂಚರು ಇದ್ದ ಸ್ಥಳದಿಂದ ಆರೋಪಿಯ ಮನೆಯು ಮುಖ್ಯ ರಸ್ತೆಯಲ್ಲೆ ಇರುತ್ತದೆ ಎಂದರೆ ಸಾಕ್ಷಿಯು 10-15 ಮೀಟರ್ ಅಂತರದಲ್ಲಿ ಮುಖ್ಯ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯು ಮನೆಯ ಆಚೆ ಇದ್ದರೆ ನಿಮ್ಮ ವಾಹನ

ಕಾಣುತ್ತದೆ ಎಂದರೆ ಸಾಕ್ಷಿ ಅದು ಹೈವೆ ರಸ್ತೆ ಇರುವುದರಿಂದ ಸುಮಾರು ವಾಹನ ಓಡಾಡುತ್ತವೆ ಕಾಣಬಹುದು ಎಂದು ನುಡಿಯುತ್ತಾರೆ.

ಚುನಾವಣೆ ಸಮಯದಲ್ಲಿ ಎಲ್ಲಿ ಎಲ್ಲಿ ಚೆಕ್ ಪೋಸ್ಟ್ ಗಳನ್ನು ಹಾಕಿದ್ದರು ಎಂದರೆ ಸಾಕ್ಷಿ ಸೋಲೂರು ಮುಖ್ಯ ರಸ್ತೆ ಹಾಗೂ ತಾಳೆಕೆರೆ ಹ್ಯಾಂಡ್ ಪೋಸ್ಟ್ ರೋಡಲ್ಲಿ ಕುಣಿಗಲ್ - ಮಾಗಡಿ ರಸ್ತೆಯಲ್ಲಿ ಚೆಕ್ ಪೋಸ್ಟ್ ಹಾಕಿದ್ದರು ಎಂದು ನುಡಿಯುತ್ತಾರೆ. ಈಗ ನೀವು ನಿಂತಿರುವ ಎದುರಿನ ದಿಕ್ಕಿಗೆ ಆರೋಪಿಯ ಮನೆ ಬಾಗಿಲು ಇದೆ ಎಂದರೆ ಸಾಕ್ಷಿಯು ಪೂರ್ವ ದಿಕ್ಕಿಗೆ ಇದೆ ಎಂದು ನುಡಿಯುತ್ತಾರೆ. ಆರೋಪಿಯ ಮನೆಯ ಬಾಗಿಲು ಉತ್ತರ ದಿಕ್ಕಿಗೆ ಇದ್ದು ನೀವು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಚಾಸಾ 1 ಮತ್ತು2 ರವರಿಗೆ ನೀವು ಯಾವುದೇ ನೋಟಿಸ್ ಜಾರಿ ಮಾಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಮಹಜರನ್ನು ಜೀಪಿನ ಲೈಟ್ ಬೆಳಕಿನಲ್ಲಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದು ಆರೋಪಿಯ ಮನೆ ಬಳಿ ಒಂದು ಸೋಲಾರ್ ಲೈಟ್ ಇದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಆರೋಪಿಯನ್ನು ಬೇಟಿ ಮಾಡಿರುವುದಿಲ್ಲ ಹಾಗೂ ಸ್ಥಳದಲ್ಲಿ ಯಾವುದೇ ಶೋಧನೆಯನ್ನು ಮಾಡಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ರಾತ್ರಿ 8.30 ರಿಂದ 9.30ರ ವರೆಗೆ ಮಹಜರ್ ಜರುಗಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪಿ.ಎಫ್ ನಲ್ಲಿ ಜಪ್ತಿ ಪಡಿಸಿಕೊಂಡ ಮುದ್ದೆಮಾಲುಗಳ ಸೀರಿಯಲ್ ನಂಬರ್, ಉತ್ಪಾದನೆ ದಿನಾಂಕ ಹಾಗೂ ಕೊನೆ ದಿನಾಂಕವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ಯಾವ distributer ನಿಂದ ಉತ್ಪಾದನೆಯಾಗಿರುತ್ತದೆ ಎಂದು ಸಹ ಕಂಪನಿ ಹೆಸರು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮದ್ಯದ ಟೆಟ್ರಾ ಪ್ಯಾಕುಗಳನ್ನು ಎಲ್ಲಿಂದ ತಂದಿರುತ್ತೀರಿ ಎಂದು ಆರೋಪಿಗೆ ವಿಚಾರಣೆ ಮಾಡಿರುತ್ತೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಮುದ್ದೆಮಾಲು 1 ರಿಂದ 3 ಅನ್ನು ಹೊರತು ಪಡಿಸಿ ಉಳಿದ ಮದ್ಯದ ಟೆಟ್ರಾ ಪ್ಯಾಕು ಮತ್ತು ಬಿಯರ್ ಬಾಟೆಲಿಗಳು ಏನಾಗಿರುತ್ತವೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಅವುಗಳನ್ನು ನಾಶ ಮಾಡಲು ಮಾನ್ಯ ಅಬಕಾರಿ ಉಪ ಆಯುಕ್ತರವರಿಗೆ ಪತ್ರಬರೆದು ಅನುಮತಿಯನ್ನು ಪಡೆದು ನಾಶಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ರಟ್ಟು ಮತ್ತು ಪ್ಲಾಸ್ಟಿಕ್ ಚೀಲದ ಬಗ್ಗೆ ಪಿ ಎಫ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಮಾಹಿತಿಯನ್ನು ಬಾತ್ಮಿದಾರರು ಫೋನ್ ನಲ್ಲಿ ತಿಳಿಸಿರುತ್ತಾರೋ ಅಥವಾ ಮೌಖಿಕವಾಗಿ ನೀಡಿರುತ್ತಾರೋ ಎಂದರೆ ಸಾಕ್ಷಿ ಮೌಖಿಕವಾಗಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಮನೆಯಿಂದ ನೀವು ಯಾವುದೇ ಮದ್ಯದ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ, ಲೋಕಸಭೆ ಚುನಾವಣೆ ನೀತಿಸಂಹಿತೆ ಇದ್ದ ಕಾರಣ ನಿಮ್ಮ ಇಲಾಖಾ ಅಂಕಿಅಂಶಕ್ಕೋಸ್ಕರ ನಿಪಿ-1 ರಿಂದ 9 ಅನ್ನು ಸೃಷ್ಟಿಸಿಕೊಂಡು ಆರೋಪಿಯ ವಿರುದ್ದ ಸುಳ್ಳು ದೂರನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವಾಗಿ ನೀವೆ ಸುಳ್ಳು ದೂರನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಮಹಜರನ್ನು ಜರುಗಿಸಿರುವುದಿಲ್ಲ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಪ್ರಕರಣಕ್ಕೋಸ್ಕರ ಮುದ್ದೆಮಾಲು 1 ರಿಂದ 3 ಅನ್ನು ಸೃಷ್ಟಿಸಿ ಕೊಂಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**